**Signature and Name of Invigilator**

1. (Signature) ______________________

 (Name) ______________________

2. (Signature) ______________________

 (Name) ______________________

**OMR Sheet No. :** ............................................

(To be filled by the Candidate)

**Roll No.** | | | | | | | | |

(In figures as per admission card)

**Roll No.** ______________________

(In words)

**D 2 1 1 5**

**Time : 1¼ hours]**

# PAPER - II
# KANNADA

**[Maximum Marks : 100**

Number of Pages in this Booklet : **12**

Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④ where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There are no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं। आपको सही उत्तर के वृत्त को पेन से भरकर काला करना है जैसा कि नीचे दिखाया गया है।
   **उदाहरण :** ① ② ● ④ जबकि (3) सही उत्तर है।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं। यदि आप OMR पत्रक पर दिये गये वृत्त के अलावा किसी अन्य स्थान पर उत्तर चिन्हांकित करते हैं, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें। हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं।
10. **केवल नीले/काले बाल प्वाईंट पेन का ही इस्तेमाल करें।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है।**
12. **गलत उत्तरों के लिए कोई नकारात्मक अंक नहीं हैं।**

## KANNADA
## PAPER - II

**Note :** This paper contains **fifty (50)** objective type questions of **two (2)** marks each. **All** questions are **compulsory**.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** 'ಶೃಂಗಾರ ಕಾರಾಗೃಹಂ' ಎಂದು ತನ್ನನ್ನು ಬಣ್ಣಿಸಿಕೊಂಡ ಕವಿ :

(1) ದುರ್ವಿನೀತ (2) ದೇವಕವಿ (3) ನೇಮಿಚಂದ್ರ (4) ಬಂಧುವರ್ಮ

**2.** 'ಕಾಯ್ದ ಬೆನ್ನೀರ್ ಮನೆ ಸುಡದು' ಎಂದು ಹೇಳಿದವನು :

(1) ರನ್ನ (2) ನಾಗವರ್ಮ (3) ದುರ್ಗಸಿಂಹ (4) ಪಂಪ

**3.** 'ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ, ಆ ತೃಣವ ಕೆಂಡ ನುಂಗಿದಂತೆ' ಎಂದು ಹೇಳಿದವನು :

(1) ಬಸವಣ್ಣ (2) ಶ್ರೀಪಾದರಾಯ (3) ಸಿದ್ಧರಾಮ (4) ಜೇಡರ ದಾಸಿಮಯ್ಯ

**4.** 'ಸಕಲ ಲಕ್ಷಣವು ವಸ್ತುಕಕೆ, ವರ್ಣಕಕಿಷ್ಟು ವಿಕಲವಾದರು ದೋಷವಿಲ್ಲ' ಎಂಬ ಮಾತು ಯಾವ ಕೃತಿಯಲ್ಲಿದೆ ?

(1) ಸೊಬಗಿನ ಸೋನೆ (2) ಕವಿರಾಜಮಾರ್ಗ

(3) ಭರತೇಶವೈಭವ (4) ಕುಮಾರರಾಮ ಸಾಂಗತ್ಯ

**5.** 'ಹೂವ ತರುವರ ಮನೆಗೆ ಹುಲ್ಲ ತರುವ' ಎಂಬ ಸಾಲು ಯಾರದು ?

(1) ಶ್ರೀಪಾದರಾಯ (2) ಪುರಂದರದಾಸ (3) ಮಹೀಪತಿದಾಸ (4) ಜಗನ್ನಾಥದಾಸ

**6.** ಕನ್ನಡಕ್ಕೆ ಮೊಟ್ಟ ಮೊದಲು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ವರ್ಷ :

(1) 1960 (2) 1956 (3) 1955 (4) 1947

**7.** 'ಮಾತಿನಲೆ ಮೂಡುವನು, ಭಾವಿಜೀವಿ ಮೈಯಾಚೆ ಉಸಿರಾಚೆ' – ಈ ಸಾಲನ್ನು ಬರೆದವರು :

(1) ಪು.ತಿ.ನ. (2) ಕುವೆಂಪು

(3) ಬೇಂದ್ರೆ (4) ಕೆ.ಎಸ್. ನರಸಿಂಹಸ್ವಾಮಿ

**8.** 'ವಿಗಡ ವಿಕ್ರಮರಾಯ' ನಾಟಕವನ್ನು ಬರೆದವರು :

(1) ಪರ್ವತವಾಣಿ (2) ಪಂಪ (3) ಶ್ರೀರಂಗ (4) ಕೈಲಾಸಂ

9. 'ಜಿಜ್ಞಾಸೆ' ಎಂಬ ಕೃತಿಯನ್ನು ಬರೆದವರು :
(1) ಎಚ್.ಎಂ. ಚನ್ನಯ್ಯ (2) ಜಿ.ಎಸ್. ಆಮೂರ (3) ಜಿ.ಎಚ್. ನಾಯಕ (4) ಡಿ.ಆರ್. ನಾಗರಾಜ

10. 'ಫಿಲಾಸಫಿ ಆಫ್ ರೆಟಾರಿಕ್' ಎಂಬ ಕೃತಿಯನ್ನು ಬರೆದವರು :
(1) ಎಡ್ವರ್ಡ್ ಬುಲ್ಲೊ (2) ಐ.ಎ. ರಿಚರ್ಡ್ಸ್ (3) ಕೊಲರಿಜ್ (4) ಕ್ರೋಚೆ

11. 'ಮೆಟಾಫಿಸಿಕಲ್ ಪೊಯೆಟ್ಸ್' ಎಂಬ ಪ್ರಬಂಧವನ್ನು ಬರೆದವರು :
(1) ಸಿಮೋನ್‌ದ ಬೋವಾ (2) ವರ್ಡ್‌ವರ್ತ್
(3) ಟಿ.ಎಸ್. ಎಲಿಯೆಟ್ (4) ರೇಮಂಡ್ ವಿಲಿಯಮ್ಸ್

12. ಇದು ಅರ್ಥಾಲಂಕಾರ :
(1) ವೃತ್ಯನುಪ್ರಾಸ (2) ರೂಪಕ (3) ಛೇಕಾನುಪ್ರಾಸ (4) ಯಮಕ

13. ಭೀಭತ್ಸ ರಸದ ಸ್ಥಾಯೀ ಭಾವ ಯಾವುದು ?
(1) ಶೋಕ (2) ಜಿಗುಪ್ಸೆ (3) ಕ್ರೋಧ (4) ವಿಸ್ಮಯ

14. 'ಎ ಲಿಟರೇಚರ್ ಆಫ್ ದೆರ್ ಓನ್' – ಈ ಕೃತಿಯನ್ನು ಬರೆದವರು ಯಾರು ?
(1) ಇಲೇನ್ ಶೋ ವಾಲ್ಟರ್ (2) ಕೇಟ್ ಮಿಲೆಟ್
(3) ಎಲೆನ್ ಮೋರ್ಸ್ (4) ಸಿಮೋನ್‌ದ ಬೋವಾ

15. 'ವ್ಯಕ್ತಿತ್ವನಿರಸನ ಸಿದ್ಧಾಂತ' ದ ಪ್ರತಿಪಾದಕ :
(1) ಎಫ್.ಆರ್. ಲಿವೀಸ್ (2) ಟಿ.ಎಸ್. ಎಲಿಯಟ್ (3) ಎಜ್ರಾಪೌಂಡ್ (4) ಐ.ಎ. ರಿಚರ್ಡ್ಸ್

16. ಇದೊಂದು ಸ್ತ್ರೀಲಿಂಗ ವಾಚಕ ಪ್ರತ್ಯಯ :
(1) ಉದು (2) ಯಿಂದ (3) ಇತಿ (4) ತನ

17. ಮೂರ್ಧನ್ಯ ಧ್ವನಿ ಯಾವುದು ?
(1) ಕ್ (2) ಪ್ (3) ಟ್ (4) ತ್

18. 'ಮದನ ವಿಳಾಸ' ಎಂಬ ಬನದ ಪ್ರಸ್ತಾಪ ಯಾವ ಶಾಸನದಲ್ಲಿದೆ ?
(1) ತಮ್ಮಟಕಲ್ಲು ಶಾಸನ (2) ಜಿನವಲ್ಲಭನ ಗಂಗಾಧರಂ ಶಾಸನ
(3) ಬಾದಾಮಿ ಶಾಸನ (4) ಹಲ್ಮಿಡಿ ಶಾಸನ

19. 'ಚಿತ್ರಕವಿತ್ವ' ಎಂಬುದು ಯಾವ ಅಲಂಕಾರ ?
(1) ಅರ್ಥಾಲಂಕಾರ (2) ವಿರೋಧಮೂಲಕ (3) ಶಬ್ದಾಲಂಕಾರ (4) ಶೃಂಖಲಾಮೂಲಕ

**20.** ‘ಕವಿರಾಜಮಾರ್ಗ’ವನ್ನು ಮೊದಲು ಸಂಪಾದಿಸಿದವರು :

(1) ಎಸ್.ಜಿ. ನರಸಿಂಹಾಚಾರ್ (2) ಕಿಟೆಲ್

(3) ಕೆ.ಬಿ. ಪಾಠಕ್ (4) ಗ್ಯಾರೆಟ್

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

**21.** ಇವು ಚಾಲುಕ್ಯರ ಕಾಲದ ಶಾಸನಗಳು :

(a) ಅತ್ತಿಮಬ್ಬೆ

(b) ಬೊಪ್ಪಣನ ಗೊಮ್ಮಟಸ್ತುತಿ

(c) ಹಲ್ಮಿಡಿ

(d) ಜಿನವಲ್ಲಭ

(1) (a) ಮತ್ತು (c) (2) (a) ಮತ್ತು (d) (3) (c) ಮತ್ತು (d) (4) (b) ಮತ್ತು (d)

**22.** ಇವು ಸಂಸ್ಕೃತ ಕೃತಿಗಳ ಪ್ರೇರಣೆಯಿಂದ ರಚನೆಗೊಂಡವುಗಳು :

(a) ಗಿರಿಜಾಕಲ್ಯಾಣ, ಸೋಮನಾಥ ಚಾರಿತ್ರ

(b) ಹರಿಶ್ಚಂದ್ರಕಾವ್ಯ, ಆದಿಪುರಾಣ

(c) ಆದಿಪುರಾಣ, ರಾಮಚಂದ್ರ ಚರಿತ ಪುರಾಣ

(d) ಕರ್ಣಾಟಕ ಕಾದಂಬರಿ, ಗಿರಿಜಾಕಲ್ಯಾಣ

(1) (b) ಮತ್ತು (c) (2) (c) ಮತ್ತು (d) (3) (a) ಮತ್ತು (b) (4) (b) ಮತ್ತು (d)

**23.** ಇವು ಹರಿನಾರಾಯಣ ಆಪ್ಟೆಯವರ ಕಾದಂಬರಿಗಳು :

(a) ಶಿವಪ್ರಭುವಿನ ಪುಣ್ಯ, ಯಾರು ಲಕ್ಷಿಸುವವರು

(b) ಯಯಾತಿ, ಕ್ಷಾತ್ರತೇಜ

(c) ಕ್ಷಾತ್ರತೇಜ, ಕಮಲಕುಮಾರಿ

(d) ಛತ್ರಪತಿ, ಕೋಸಲ

(1) (a) ಮತ್ತು (c) (2) (a) ಮತ್ತು (d) (3) (b) ಮತ್ತು (c) (4) (c) ಮತ್ತು (d)

**24.** ಇವು ನವೋದಯಪೂರ್ವ ಕಾದಂಬರಿಗಳು :

(a) ಇಂದಿರಾ, ಇಂದಿರಾಬಾಯಿ

(b) ಇಂದಿರಾಬಾಯಿ, ಅಂತರಂಗ

(c) ವಾಗ್ದೇವಿ, ವಿಶ್ವಾಮಿತ್ರ ಸೃಷ್ಟಿ

(d) ವಾಗ್ದೇವಿ, ಮಾಡಿದ್ದುಣ್ಣೋ ಮಹಾರಾಯ

(1) (b) ಮತ್ತು (c) (2) (a) ಮತ್ತು (d) (3) (a) ಮತ್ತು (b) (4) (c) ಮತ್ತು (d)

**25.** ಇವು ನವ್ಯ ಪಂಥದ ಸಣ್ಣಕತೆಗಳು :

(a) ಹರಕೆಯ ಹಣ, ಅವನತಿ

(b) ಹದ್ದು, ಕ್ಷಿತಿಜ

(c) ಕ್ಲಿಪ್‌ಜಾಯಿಂಟ್, ರಾಕ್ಷಸ

(d) ಸುಂಟರಗಾಳಿ, ಕಲ್ಲುಕರಗುವ ಸಮಯ

(1) (a) ಮತ್ತು (b) (2) (c) ಮತ್ತು (d) (3) (b) ಮತ್ತು (c) (4) (a) ಮತ್ತು (d)

**26.** ಇವು ಪೌರಾಣಿಕ ವಸ್ತುವನ್ನಾಧರಿಸಿದ ನಾಟಕಗಳು :

(a) ಹಿಟ್ಟಿನ ಹುಂಜ, ಕಾಕನ ಕೋಟೆ

(b) ಕೇಳು ಜನಮೇಜಯ, ಅಹಲ್ಯೆ

(c) ಕುರುಕ್ಷೇತ್ರ, ಯಯಾತಿ

(d) ಶೂದ್ರ ತಪಸ್ವಿ, ಹೆಬ್ಬೆರಳು

(1) (c) ಮತ್ತು (d) (2) (a) ಮತ್ತು (c) (3) (b) ಮತ್ತು (d) (4) (a) ಮತ್ತು (d)

**27.** ಇವರು ಕನ್ನಡ ರಸತತ್ವ ಚಿಂತಕರು :

(a) ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ

(b) ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್

(c) ಶಿವರಾಮಕಾರಂತ, ಯು.ಆರ್. ಅನಂತಮೂರ್ತಿ

(d) ಪು.ತಿ.ನ., ಬೇಂದ್ರೆ

(1) (a) ಮತ್ತು (c) (2) (a) ಮತ್ತು (b) (3) (c) ಮತ್ತು (d) (4) (a) ಮತ್ತು (d)

**28.** ಇವು ಅರ್ಥ ಸಂಕೋಚಕ್ಕೆ ಉದಾಹರಣೆಗಳು :

(a) ಸೀರೆ, ಶ್ರಾದ್ಧ

(b) ಗಮಾರ, ನಾರು

(c) ನೆಯ್, ಪೊನ್

(d) ಎಣ್ಣೆ, ಓಲೆ

(1) (a) ಮತ್ತು (d) (2) (b) ಮತ್ತು (c) (3) (a) ಮತ್ತು (c) (4) (c) ಮತ್ತು (d)

**29.** ಇವು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು :

(a) ಕಾವ್ಯ ಪ್ರತಿಮೆ

(b) ಪ್ರತಿಭೆ

(c) ವಸ್ತು ಪ್ರತಿರೂಪ

(d) ಕವಿ ಸಮಯ

(1) (a) ಮತ್ತು (b) (2) (b) ಮತ್ತು (d) (3) (a) ಮತ್ತು (c) (4) (c) ಮತ್ತು (d)

30. ಇವು ಸಾವು ಕೇಂದ್ರಿತ ಸಣ್ಣಕತೆಗಳು :

(a) ಅದೃಷ್ಟ, ಪಯಣ

(b) ಆಟ, ಆಬೋಲಿನ

(c) ಮೊಸರಿನ ಮಂಗಮ್ಮ, ನಾನು ಕೊಂದ ಹುಡುಗಿ

(d) ಪ್ರಶ್ನೆ, ತಪ್ತ

(1) (a) ಮತ್ತು (d) (2) (b) ಮತ್ತು (c) (3) (b) ಮತ್ತು (d) (4) (a) ಮತ್ತು (b)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

**ಈ ಕೆಳಗಿನ ಲೇಖನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.**

ಹರಿಪುರಿಯೆಂಬ ಪೊೞಲೊಳ್ ಗಂಭೀರೆಯೆಂಬೊಳೊರ್ವಳ್ ಬಿರ್ದ್ದಿಯಾಕೆಯ ಮಗಳ್ ಹರಿಣಿ ಯೆಂಬೊಳಾಕೆಯಂ ಜಯಂತಮೆಂಬ ಪೊೞಲೊಳ್ ವಸುದತ್ತನೆಂಬ ಪರದಂಗೆ ಕೊಟ್ಟೊಡಾಕೆಗೆ ಗರ್ಭಮಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳ್ ಮಂಡಗೆಗಳುಂ ಮೊದಲಾಗೊಡೆಯ ಪಲವುಂ ಭಕ್ಷ್ಯರೂಪಂಗಳುಮಂ ಕೊಂಡು ಗಂಭೀರೆಯೆಂಬ ಬಿರ್ದ್ದಿ ಹರಿಪುರದಿಂ ಪೊಱಮಟ್ಟು ಮಗಳಿರ್ದ್ದೂರ್ಗ್ಗೆ ಪೋಪಳನ್ನೆಗವೆಡೆಯೊಳೆಣ್ಬರ್ ಕಳ್ಳರಂ ಕಂಡವರೊಳಗೊರ್ವನಂ ಪಿಡಿದಱ್ತ್ತನ್ನಮಗಂ ನಿನ್ನನೆ ಪೋಲ್ಕುಂ ಪನ್ನೆರಟ್ಬರಿಸಂ ಪೋದೊನೆತ್ತ ಪೋದನೆಂದಱಿಯೆನಾತನಂ ಕಾಣದಿರುಳುಂ ಪಗಲುಂ ನೆನೆದಟ್ಟು ಕಣ್ಗಳ್ ಬಾತಿರ್ಪುವಿಂದೆನಗೆ ಆತಂ ಬಂದಂತಿರೆ ನಿನ್ನಂ ಕಂಡು ಸಂತಸಮಾಯ್ತು ಮಗನೆ ನೀಮೆಲ್ಲಂ ಬನ್ನಿಂ ಪೋಪಂ ಸಾರೆಯೂರಂ ಮಿಂದುಂಡುಟ್ಟು ವಿಶ್ರಮಿಸಿ ನಾಳೆ ಪೋಪಿರೆಂದೊಡಗೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗೆಲ್ಲಂ ನೀರನಿಡಿಸಿ ತಲೆಯಂ ಪೂಸಿಸಿಯೊಲ್ಲಣಿಗೆಯನುಡಿಸಿ ತಲೆಯೊಳ್ ಕಟಿ'ಯಂ ಪೊಯ್ದಾಗಳ್ ಬಿರ್ದ್ದಿ ಮನೆಯ ಮೇಗೇಱಿ ಕಳ್ಳರೆಂದು ಪೊಯ್ಯಲಿಟ್ಟಾಗಳನಿಬರುಂ ತ್ರಸ್ತಾಭಿ ಭೂತರಾಗಿ ಪಟ್ಟನೆ ಪಾಱಿಯೋಡಿ ಕೆಟ್ಟೋೞ್ತೆಮ್ಮಂ ಬಿರ್ದ್ದಿ ಛಿದ್ರಿಸಿದಳೆಂದು ಪಗೆಸಾಱಿರ್ದ್ದರಿತ್ತ ಬಿರ್ದ್ದಿಯುಂ ನೆಟ್ಟನಿಂದಿರುಳ್ ಕಳ್ಳರ್ ಬರ್ಪರೆಂದಱಿದು ಕೂರಿತಪ್ಪ ಬಾಳಂ ಪಿಡಿದಿರ್ದಳನ್ನೆಗ ಮಿರುಳ್ ಕಳ್ಳರ್ ವಂದಾಕೆಯ ಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳಾ ಬಾಳನಡ್ಡಮಿಟ್ಟು ಪಿಡಿದಿರ್ದ್ದು ಪುಗುವ ಕಳ್ಳನ ಮೂಗನರಿದೊಡವಂ ಪೊಱಮಟ್ಟು ತನಗೆ ಪುಗಲ್ ಪಾಂಗಿಲ್ಲ ನೀಂ ಪುಗೆಂದು ಪೆಱನೊರ್ವನಂ ಪುಗಿಸಿದೊಡಾತನ ಮೂಗುಮಂ ಕೊಱೆ ದೊಡಾತನುಂ ಪೆಱನೊರ್ವನಂ ಪುಗಿಸೆ ಸೂಟುಸೂಟಿೞೆ ಪೊಕ್ಕೊಡನಿಬರ ಮೂಗುಮಂ ಕೊಱೆದಿಕ್ಕಿದೊಡನಿಬರುಂ ಮೂಗರಿಯೆಪಟ್ಟು ಪೊಱಮಟ್ಟು ಪೋಗಿಯೊರ್ವನಿಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿ ಪುಡುಕೆಯಂ ತೆಗೆದು ಪೊತ್ತುಪೋಗಿ ಪೊಱವೊೞಲೊಳ್ ಶ್ಮಶಾನ ದೊಳಿಟೆಪಿ ಕುೞಿಯಂ ಕಳ್ದುತಂದಱುವರ್ ಕಳ್ಳರುಂ ಮಱಲುಂದಿದರೊರ್ವನಾ ಕುಱಿಯಂ ಕೊಂದು ಜಾವಮಿರ್ದು ಮಸಣದ ಕಿಚ್ಚಿನೊಳ್ ಪಿಶಿತಮಂ ಮಾಡುತ್ತಿರ್ದ್ದು ಪುಡುಕೆಯಂ ತೆಱೆದು ನೋಟ್ಟಿನನ್ನೆಗಮದಱೊಳಗಿರ್ದ ಇಂದ್ರಜಾಲಿಗರ ಪಾಪೆಗಳುಂ ಸೀರೆಗಳುಂ ಝುಣಂಬಮುಂ ಕೊಂಡೊಂದು ಪ್ರತಿಮುಖಮಂ ಕೊಂಡು ತನ್ನ ಮುಖದೊಳಿಟ್ಟು ಪುಲಿಯ ಝುಣಂಬಮುಮಂ ತೊಟ್ಟು ಶ್ಮಶಾನದೊಳುರಿವ ಕಿಚ್ಚಿನ ಪಕ್ಕದೆ ನಿಂದಿರ್ದನನ್ನೆಗಮೆಟ್ಟುತ್ತು ಕಂಡಱುವರುಂ ಕಳ್ಳರುಂ ಬೇತಾಳನೆಂದಂಜಿ ಪ್ರಾಣಭಯದಿಂದೋಡಿ ಕೆಟ್ಟರಾತನುಮವ ರೋಡುವುದಂ ಕಂಡು ಪಿಶಿತಮಂ ಕೊಂಡು ಬಟೆಯಂ ತಗುಳೆ ಎನಿತೆನಿತಾತನಂ ಕಾಣ್ಬರನಿತನಿತನೆ ಬೇತಾಳಂ ಬಟೆಯಂ ತಗುಳ್ದನೆಂದೋಡೆ ಪ್ರತಿಮುಖಮುಮಂ ಝುಣಂಬಮುಮಂ ಕಳೆದೀಡಾಡಿ ತನ್ನ ಪೆಸರಂ ಪೇೞ್ದುವರಂ ಮಾಣಿಸಿಯೊಡಗೂಡಿ ತನ್ನ ಮಾಡಿದ ಪಿಶಿತಮನವರ್ಗ್ಗೆಲ್ಲಂ ಪರ್ಚ್ಚಿಗೊಟ್ಟುಮನಿಬರುಮೊಂದಾಗಿ ಪೋಪನ್ನೆಗಂ.

ಇತ್ತ ಗಂಭೀರೆಯೆಂಬ ಬಿರ್ದ್ದಿ ಬೈಗಿರುಳಿನೊಂದು ಜಾವಮುಂಟೆನೆ ಎೞ್ದು ಪೊೞಲಂ ಪೊಱಮಟ್ಟು ತನ್ನೂರ್ಗ್ಗೆವೋಪಳ್ ನೆರಂಬೆಱ ದಂಜಿ ವಂದಾಲದ ಮರನನೇಱಿರ್ದಳನ್ನೆಗಮಾ ಕಳ್ಳರಾಕೆಯೇಱಿರ್ದ್ದ ಮರಕ್ಕೆ ವಂದವರೊಳೊರ್ವಂ ಬಟ್ಟೆಯೊಳ್ ಬರ್ಪ ಜನಮಂ ನೋಡಲ್ವೇಡಿ ಮರದ ತುತ್ತತುದಿಯನೇಱಿ ನೋಟ್ಪನ್ನೆಗಂ ಮರದ ಮೇಗಿರ್ದ ವೃದ್ಧಸ್ತ್ರೀಯಂ ಕಂಡು

ನೀನಾರ್ಗೆಂದಾತಂ ಬೆಸಗೊಂಡೊಡಾಕೆಯಾನೀ ಮರದೊಳಿರ್ಪ್ಪ ಯಕ್ಷದೇವತೆಯೆಂದೊಡಾತ ನೆನಗೆ ಪೆಂಡತಿಯಪ್ಪಾ ಎಂದು ಬೆಸಗೊಂಡೊಡೊಂದು ಪಾಂಗಿನೊಳಪ್ಪೆನೀ ಪಿಶಿತದ ಖಂಡಮಂ ನಾಲಗೆಯಿಂ ಪಿಡಿದೆನ್ನ ಬಾಯೊಳಿಡುವೊಡೆ ನಿನಗಾಂ ಪೆಂಡತಿಯಪ್ಪೆನೆಂದು ನುಡಿದೊಡಾತನುಂ ನಾಲಗೆಯಿಂದಂ ಪಿಶಿತದ ಖಂಡಮಂ ಬಾಯೊಳಿಡೆ ನಾಲಗೆಯಂ ಪಱಿಯೆ ಕಚ್ಚಿದೊಡವಂ ಮುಯ್ಯಲಿಟ್ಟಂಜಿ ಬೀಱೆ ಅನಿಬರುಂ ಭಯದಿಂದೋಡೆ ವೃದ್ಧಸ್ತ್ರೀಯೆಂದಳ್ ಎನಗೆ ನಿಮ್ಮ ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ತಂದೀ ಮೊಟಲೊಳಿಟ್ಟು ಪೋಪೊಡೆ ಬಾಟ್ವಿ ರಲ್ಲದಾಗಳ್ ಸತ್ತಿರ್ ನಿಮ್ಮೆಲ್ಲರುಮಂ ತಿಂದಪ್ಪೆನೆಂದೊಡಂಜಿ ಕಳ್ಳರಂತೆಗೆಯ್ವೆಮೆಂದೊಡಂಬಟ್ಟು ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ಮರದ ಮೊಟಲೊಳಿಟ್ಟು ದಿವಸಕ್ಕಂ ಪೋಪರಾವೃದ್ಧ ಸ್ತ್ರೀಯುಂ ತನ್ನೂರಿಂದಂ ಬಂದು ಕಸವರಮಂ ಕೊಂಡು ಪೋಕುಂ.

**31.** ಗಂಭೀರೆಯು ಮಗಳ ಊರಿಗೆ ಹೊರಟು ಹೋದುದು :

(1) ಕಳ್ಳರಿಗೆ ಹೆದರಿ ಜೀವ ಉಳಿಸಿಕೊಳ್ಳಲು

(2) ಮಗಳಾದ ಹರಿಣಿಯು ತಾಯಿಯನ್ನು ತನ್ನಲ್ಲಿಗೆ ಬರುವಂತೆ ವಿನಂತಿಸುದದರಿಂದ

(3) ಮಗಳ ಬಯಕೆಯನ್ನು ಪೂರೈಸುವುದಕ್ಕಾಗಿ

(4) ವಸುದತ್ತನು ಪತ್ನಿಗೆ ಕಾಯಿಲೆಯೆಂದು ತಿಳಿಸುದುದಕ್ಕೆ

**32.** ಗಂಭೀರೆಯು ಕಳ್ಳರಿಂದ ಬರುವ ಅಪಾಯವನ್ನು ತಪ್ಪಿಸಿಕೊಂಡುದು :

(1) ಕಳ್ಳರರಿಯದಂತೆ ಓಡಿ ಹೋಗುವ ಮೂಲಕ

(2) ಕಳ್ಳನೊಬ್ಬನನ್ನು ಊರು ಬಿಟ್ಟು ಹೋದ ತನ್ನ ಮಗನೇ ಆತನೆಂದು ಪ್ರೀತಿ ತೋರುವ ಮೂಲಕ

(3) ಕಳ್ಳರಿವರೆಂದು ಬೊಬ್ಬಿಡುವ ಮೂಲಕ

(4) ಕಳ್ಳರೆಲ್ಲರೂ ತನ್ನಲ್ಲಿಗೆ ಬಂದು ಆತಿಥ್ಯ ಸ್ವೀಕರಿಸಬೇಕೆಂದು ಕೇಳುವ ಮೂಲಕ

**33.** ಗಂಭೀರೆ ಮನೆಯ ಮೇಲೇರಿ ಕಳ್ಳರೆಂದು ಬೊಬ್ಬಿಟ್ಟುದರ ಪರಿಣಾಮ :

(1) ಕಳ್ಳರೆಲ್ಲರನ್ನು ಕೊತವಾಲನು ಬಂಧಿಸಿದುದು

(2) ಕಳ್ಳರು ಭಯದಿಂದ ಹೆದರಿ ಓಡಿದುದು

(3) ಕಳ್ಳರು ಕೈಗಳಲ್ಲಿ ಕತ್ತಿ ಹಿಡಿದು ಹೆದರಿಸಿದುದು

(4) ಗಂಭೀರೆಯ ಮೂಗನ್ನು ಕತ್ತರಿಸಿದುದು

**34.** ಕಳ್ಳರು ಸ್ಮಶಾನದಲ್ಲಿ ಯಾರನ್ನು ಕಂಡು ಅಂಜಿದರು ?

(1) ಇಂದ್ರಜಾಲಿಗನ ವಸ್ತುಗಳನ್ನು ಧರಿಸಿದ ಕಳ್ಳನನ್ನು ಬೇತಾಳನೆಂದು ಭಾವಿಸಿ

(2) ಕತ್ತಿಯನ್ನು ಹಿಡಿದು ಝಳಪಿಸಿದ ಗಂಭೀರೆಯನ್ನು ಕಂಡು

(3) ಸ್ಮಶಾನದ ಕಿಚ್ಚಿನಲ್ಲಿ ಬೇಯಿಸುತ್ತಿರುವ ಪಿಶಿತವನ್ನು ಕಂಡು

(4) ವಸುದತ್ತನು ಅಟ್ಟಿಸಿಕೊಂಡು ಬರುತ್ತಿರುವುದನ್ನು ಕಂಡು

35. ನನ್ನ ಹೆಂಡತಿಯಾಗುವೆಯಾ ಎಂದು ಕೇಳಿದ ಕಳ್ಳನಿಗೆ ಗಂಭೀರೆ ಬುದ್ಧಿ ಕಲಿಸಿದ ಬಗೆ :

(1) ಗಂಭೀರೆಯು ತಾನು ಮರದೊಳಿದ್ದ ಯಕ್ಷ ದೇವತೆ ಎಂದುದು

(2) ಪಿಶಿತದ ತುಂಡನ್ನು ಬಾಯಲ್ಲಿಟ್ಟಾಗ ಕಳ್ಳನ ನಾಲಗೆ ತುಂಡಾಗುವಂತೆ ಕಚ್ಚಿದ್ದು

(3) ಆಲದ ಮರವನ್ನು ಏರುವಂತೆ ಒತ್ತಾಯಿಸಿದುದು

(4) ತನ್ನ ಮಗಳ ಮನೆಗೆ ಎಂದೂ ಬರುವುದಿಲ್ಲವೆಂದು ಆಣೆಯಿಡುವಂತೆ ಮಾಡಿದುದು

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

36. **ಹೇಳಿಕೆ :** ಮೃತ್ಯುಸ್ತತ್ಕ್ಷಣಿಕೋ ದುಃಖಮ್ಮಾನಭಂಗನ್ದಿನೇ ದಿನೇ.

**ವಿವರಣೆ :** ಸಾವಿನ ದುಃಖ ಕ್ಷಣಿಕವಾದರೆ ಮಾನಭಂಗದ ದುಃಖ ನಿರಂತರವಾದುದು.

(1) **ಹೇಳಿಕೆ** ಸರಿ, **ವಿವರಣೆ** ತಪ್ಪು
(2) **ಹೇಳಿಕೆ** ತಪ್ಪು, **ವಿವರಣೆ** ತಪ್ಪು
(3) **ಹೇಳಿಕೆ** ಸರಿ, **ವಿವರಣೆ** ಸರಿ
(4) **ಹೇಳಿಕೆ** ತಪ್ಪು, **ವಿವರಣೆ** ಸರಿ

37. **ಹೇಳಿಕೆ :** 'ನೀನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ಟೆ ಮಾಸದೆ'.

**ವಿವರಣೆ :** ನೀನು ಒಲಿದ ಲತೆಯನ್ನು ಮತ್ತು ಧರೆಯನ್ನು ಆಕ್ರಮಿಸಿದರೆ ಕೀರ್ತಿ ಕೆಡುತ್ತದೆ.

(1) **ಹೇಳಿಕೆ** ಸರಿ, **ವಿವರಣೆ** ಸರಿ
(2) **ಹೇಳಿಕೆ** ಸರಿ, **ವಿವರಣೆ** ತಪ್ಪು
(3) **ಹೇಳಿಕೆ** ತಪ್ಪು, **ವಿವರಣೆ** ಸರಿ
(4) **ಹೇಳಿಕೆ** ತಪ್ಪು, **ವಿವರಣೆ** ತಪ್ಪು

38. **ಹೇಳಿಕೆ :** 'ಜನಪನಪಕೀರ್ತ್ಯಂಗನೆಗೆ ತೊಡಿಸಿದನು ಭೂಷಣವ'.

**ವಿವರಣೆ :** ಜನಪದರು ಕೀರ್ತಿ ಅಂಗನೆಗೆ ಅಲಂಕಾರ ಮಾಡಿದರು.

(1) **ಹೇಳಿಕೆ** ತಪ್ಪು, **ವಿವರಣೆ** ತಪ್ಪು
(2) **ಹೇಳಿಕೆ** ಸರಿ, **ವಿವರಣೆ** ತಪ್ಪು
(3) **ಹೇಳಿಕೆ** ತಪ್ಪು, **ವಿವರಣೆ** ಸರಿ
(4) **ಹೇಳಿಕೆ** ಸರಿ, **ವಿವರಣೆ** ಸರಿ

39. **ಹೇಳಿಕೆ :** "ವಿಭಾವಾನುಭಾವ ಸಂಯೋಗಾದ್ರಸನಿಷ್ಪತ್ತಿಃ".

**ವಿವರಣೆ :** ವಿಭಾವಗಳು, ಅನುಭಾವಗಳು, ಸಂಚಾರಿಭಾವಗಳ ಸಂಯೋಗದಿಂದ ರಸನಿಷ್ಪತ್ತಿಯಾಗುವುದು.

(1) **ಹೇಳಿಕೆ** ತಪ್ಪು, **ವಿವರಣೆ** ತಪ್ಪು
(2) **ಹೇಳಿಕೆ** ಸರಿ, **ವಿವರಣೆ** ಸರಿ
(3) **ಹೇಳಿಕೆ** ಸರಿ, **ವಿವರಣೆ** ತಪ್ಪು
(4) **ಹೇಳಿಕೆ** ತಪ್ಪು, **ವಿವರಣೆ** ಸರಿ

40. **ಹೇಳಿಕೆ :** "ಬೇಸರಿಯ ಕಿರಿಮುತ್ತು ನುಚ್ಚಿನಲಿ ಮುಚ್ಚಿರಲು ಹುಡುಕುತಿವೆ ಆ ಹತ್ತು ಬೆರಳು".

**ವಿವರಣೆ :** ಮುತ್ತುಗಳು ನುಚ್ಚಿನಲ್ಲಿ ಮುಚ್ಚಿ ಹೋಗಿದ್ದರಿಂದ ಬೇಸರದಿಂದ ಹತ್ತು ಬೆರಳುಗಳು ಹುಡುಕಾಡುತ್ತಿವೆ.

(1) **ಹೇಳಿಕೆ** ತಪ್ಪು, **ವಿವರಣೆ** ತಪ್ಪು (2) **ಹೇಳಿಕೆ** ಸರಿ, **ವಿವರಣೆ** ಸರಿ

(3) **ಹೇಳಿಕೆ** ಸರಿ, **ವಿವರಣೆ** ತಪ್ಪು (4) **ಹೇಳಿಕೆ** ತಪ್ಪು, **ವಿವರಣೆ** ಸರಿ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದುವುದಿಲ್ಲ ?

(1) ದೇವಚಂದ್ರ – ರಾಜಾವಳೀ ಕಥೆ (2) ಸಿಂಗರಾರ್ಯ – ಮಿತ್ರವಿಂದಾಗೋವಿಂದ

(3) ದೇವರಾಜ – ಕುಮಾರರಾಮ ಸಾಂಗತ್ಯ (4) ಲಕ್ಕಣದಂಡೇಶ – ಶಿವತತ್ವ ಚಿಂತಾಮಣಿ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ವಾಕ್ಯಂ ರಸಾತ್ಮಕಂ ಕಾವ್ಯಂ – ವಿಶ್ವನಾಥ (2) ಕಾವ್ಯಸ್ಯಾತ್ಮಾ ಧ್ವನಿಃ – ಕುಂತಕ

(3) ಶಬ್ದಾರ್ಥೌ ಸಹಿತೌ ಕಾವ್ಯಂ – ಭಾಮಹ (4) ರೀತಿರಾತ್ಮಾ ಕಾವ್ಯಸ್ಯ – ವಾಮನ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ರಾಮಚಂದ್ರ ಶರ್ಮ – ಸಪ್ತಪದಿ (2) ಸು.ರಂ. ಎಕ್ಕುಂಡಿ – ಬಕುಳದ ಹೂವು

(3) ವಿ. ಸೀತಾರಾಮಯ್ಯ – ಅರಲು ಬರಲು (4) ವ್ಯಾಸರಾಯ ಬಲ್ಲಾಳ – ದುರ್ಗಾಸ್ತಮಾನ

44. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಅರಿಸ್ಟಾಟಲ್ – ಕಾವ್ಯ ಅನುಕರಣಾತ್ಮಕ ಕಲೆ

(2) ಸಿ.ಡಿ. ಲೂಯಿ – ಪರಕೀಯತೆ

(3) ಲಾಂಜಿನಸ್ – ಕಾವ್ಯದ ಉದ್ದೇಶ ಉದ್ದೀಪನಗೊಳಿಸುವುದು

(4) ಕೋಲರಿಜ್ – ಆನುಷಂಗಿಕ ಪ್ರತಿಭೆ

45. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ತತ್ಪುರುಷ – ಹಣೆಗಣ್ಣು (2) ಕರ್ಮಧಾರಯ – ಇಮ್ಮಡಿ

(3) ಗಮಕ – ಹಾಡಿದ ಹಾಡು (4) ಬಹುವ್ರೀಹಿ – ಅಂಗಾಲು

**ಬಹು ಆಯ್ಕೆಯ ಜೋಡಣೆ :**

**46.** (a) ದೇಶ್ಯ — (i) ಹಲ್ಲುಮಡಿ

(b) ಅನ್ಯದೇಶ್ಯ — (ii) ಒಡವೆ

(c) ತದ್ಭವ — (iii) ವಿಭಕ್ತಿ

(d) ಭಾಷಾಂತರ ಸ್ವೀಕರಣ — (iv) ಆಣತಿ

(v) ಬಟಾಟೆ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (1) | (ii) | (v) | (i) | (iii) |
| (2) | (iii) | (v) | (iv) | (i) |
| (3) | (iii) | (v) | (i) | (iv) |
| (4) | (ii) | (v) | (iv) | (i) |

**47.** (a) ನಲ್ಮೆ — (i) ಎ.ಕೆ. ರಾಮಾನುಜನ್

(b) ಉಪ್ಪುಕಡಲು — (ii) ಚೆನ್ನವೀರ ಕಣವಿ

(c) ಹೊಕ್ಕುಳಲ್ಲಿ ಹೂವಿಲ್ಲ — (iii) ಎಸ್.ವಿ. ಪರಮೇಶ್ವರಭಟ್ಟ

(d) ದೀಪಧಾರಿ — (iv) ಪು.ತಿ.ನ.

(v) ಕಡಂಗೋಡ್ಲು ಶಂಕರಭಟ್ಟ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (1) | (iii) | (v) | (i) | (ii) |
| (2) | (iii) | (v) | (ii) | (i) |
| (3) | (v) | (iii) | (i) | (iv) |
| (4) | (v) | (iii) | (i) | (ii) |

**48.** (a) ಗಬನ್ — (i) ರವೀಂದ್ರನಾಥ ಠಾಕೂರ್

(b) ಏಣಿಯ ಮೆಟ್ಟಿಲುಗಳು — (ii) ಬಂಕಿಮ ಚಂದ್ರ ಚಟರ್ಜಿ

(c) ಇಂದಿರೆ — (iii) ಪ್ರೇಮಚಂದ್

(d) ಅಂಚೆಮನೆ — (iv) ಸುಬ್ರಹ್ಮಣ್ಯ ಭಾರತಿ

(v) ತಗಳಿ ಶಿವಶಂಕರ ಪಿಳ್ಳೆ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (1) | (iii) | (v) | (ii) | (i) |
| (2) | (ii) | (iii) | (i) | (v) |
| (3) | (ii) | (v) | (i) | (iii) |
| (4) | (iii) | (v) | (i) | (ii) |

**ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ :**

**49.** (1) ದ್ರೌಪದಿಯ ಶ್ರೀಮುಡಿ, ಹೊಸಗನ್ನಡದ ಅರುಣೋದಯ, ಕನ್ನಡದಲ್ಲಿ ಭಾವಗೀತೆ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ

(2) ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ದ್ರೌಪದಿಯ ಶ್ರೀಮುಡಿ, ಕನ್ನಡದಲ್ಲಿ ಭಾವಗೀತೆ, ಹೊಸಗನ್ನಡದ ಅರುಣೋದಯ

(3) ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಕನ್ನಡದಲ್ಲಿ ಭಾವಗೀತೆ, ದ್ರೌಪದಿಯ ಶ್ರೀಮುಡಿ, ಹೊಸಗನ್ನಡದ ಅರುಣೋದಯ

(4) ಹೊಸಗನ್ನಡದ ಅರುಣೋದಯ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಕನ್ನಡದಲ್ಲಿ ಭಾವಗೀತೆ, ದ್ರೌಪದಿಯ ಶ್ರೀಮುಡಿ

**50.** (1) ಸಮಯ ಪರೀಕ್ಷೆ, ನಂಬಿಯಣ್ಣನ ರಗಳೆ, ಭರತೇಶ ವೈಭವ, ಶ್ರೀರಾಮ ಪಟ್ಟಾಭಿಷೇಕ

(2) ನಂಬಿಯಣ್ಣನ ರಗಳೆ, ಸಮಯ ಪರೀಕ್ಷೆ, ಶ್ರೀರಾಮ ಪಟ್ಟಾಭಿಷೇಕ, ಭರತೇಶ ವೈಭವ

(3) ಸಮಯ ಪರೀಕ್ಷೆ, ನಂಬಿಯಣ್ಣನ ರಗಳೆ, ಶ್ರೀರಾಮ ಪಟ್ಟಾಭಿಷೇಕ, ಭರತೇಶ ವೈಭವ

(4) ನಂಬಿಯಣ್ಣನ ರಗಳೆ, ಸಮಯ ಪರೀಕ್ಷೆ, ಭರತೇಶ ವೈಭವ, ಶ್ರೀರಾಮ ಪಟ್ಟಾಭಿಷೇಕ

- o 0 o -

**Space For Rough Work**